ಅಂಕೋಲೆಯಿಂದ ಗಂಗಾವಳಿ ನದಿಯ ದಡಕ್ಕೆ ಬಂದು ತಲುಪುವ ಮುಖ್ಯರಸ್ತೆಯ ಎಡಭಾಗದಲ್ಲಿ ಬಾಸ್ಗೋಡು ಎಂಬ ಊರಿದೆ. ಅಲ್ಲಿ ರಸ್ತೆಗೆ ಹೊಂದಿಕೊಂಡಂತೆಯೇ ಇರುವ ಅರಳಿಕಟ್ಟೆಯ ಪಕ್ಕದಲ್ಲೊಂದು ಪುಟ್ಟ ಗಾಂಧೀಗುಡಿಯಿದೆ. ಈ ಗಾಂಧೀಗುಡಿಯ ಚರಿತ್ರೆಯೊಂದಿಗೆ ಈ ಸೀಮೆಯ ಜನಹೋರಾಟದ ಕಥೆಯಿದೆ. ಈ ನದೀದಡದ ಊರಿನ ಹೆಣ್ಣುಮಗಳೊಬ್ಬಳು ಬ್ರಿಟಿಷ್ ಅಧಿಕಾರಿಯನ್ನು ಬೆನ್ನಟ್ಟಿಕೊಂಡು ಬಂದು **Go back** ಎಂದು ಕೂಗಿ ಕೂಗಿ ಓಡಿಸಿದ್ದಳಂತೆ. ತಮ್ಮನ್ನು ಅರೆಸ್ಟ್ ಮಾಡಲು ಬರುವ ಪೊಲೀಸರಿಂದ ತಪ್ಪಿಸಿಕೊಂಡು ಸ್ವಾತಂತ್ರ್ಯ ಹೋರಾಟಗಾರರು ಈಜು ಬಿದ್ದು ಊರಿಂದೂರಿಗೆ ಮರೆಯಾಗಿ ಭೂಗತರಾಗುತ್ತಿದ್ದರಂತೆ. ನದೀದಡದ ಕಾಂಗೋ ಕಾಡುಗಳಲ್ಲಿ ಮರೆಯಾಗುತ್ತಿದ್ದರಂತೆ. ಆ ಎಲ್ಲ ಸಾಹಸಕ್ಕೂ ನದಿ ಸಾಕ್ಷಿಯಾಗಿತ್ತು.

ಸಾಮಾನ್ಯವಾಗಿ ಚರಿತ್ರೆಗೊಂದು ಜಾರಿಕೆಯ ಗುಣ ಇರುತ್ತದೆನ್ನುತ್ತಾರೆ. ಅದು ಮೇಲ್ಮೇಲೆ ಹಾಯಿಸಿ ಹೋಗಿಬಿಡುತ್ತದೆ. ನಾವು ಓದಿದ ಇತಿಹಾಸದ ಪಠ್ಯಪುಸ್ತಕಗಳಲ್ಲಿ ಅಂಕೋಲೆಯನ್ನು ‘ಕರ್ನಾಟಕದ ಬಾರ್ಡೋಲಿ’ ಎಂದು ಕರೆದಿದ್ದು ದಾಖಲಾಗಿತ್ತು. ಅದು ಯಾಕೆ ಎಂಬ ಸೂಕ್ಷ್ಮಗಳ ವಿವರಣೆಯಿರಲಿಲ್ಲ. ಅಲ್ಲಿ ನಡೆದ ಜನಹೋರಾಟಗಳ ಬಗ್ಗೆ ವಿವರಿಸಿರಲಿಲ್ಲ. ಇಲ್ಲಿ ಗಾಂಧೀಗುಡಿಯನ್ನು ಯಾರು, ಯಾಕೆ, ಯಾವಾಗ ಕಟ್ಟಿಸಿದರು ಎಂಬುದನ್ನು ಇತ್ತೀಚಿನವರು ತಕ್ಷಣಕ್ಕೆ ಹೇಳಲಾರರು. ಅದೀಗ ಅಲಕ್ಷಿತ ಚರಿತ್ರೆಯ ಸಂಕೇತದಂತಿದೆ.

ಈ ಕುರಿತು ಹುಡುಕಾಡಿದರೆ, ಶಾಂತಾರಾಮ ನಾಯಕ ಹಿಚ್ಕಡ ಅವರು ಬರೆದ ‘ಕರಬಂಧಿ ಡಿಕ್ಟೇಟರ್ ಬಾಸ್ಗೋಡ ರಾಮ ನಾಯಕ’ ಎಂಬ ಜೀವನ ಚರಿತ್ರೆಯಲ್ಲಿ ಮಾಹಿತಿ ದೊರಕುತ್ತದೆ. ಇದಕ್ಕೆ ಪೂರಕವಾಗಿ, ವಿಷ್ಣು ನಾಯ್ಕರ ‘ದುಡಿಯುವ ಕೈಗಳ ಹೋರಾಟದ ಕಥೆ’, ಜಿ.ಎಚ್. ನಾಯಕರ ಆತ್ಮಕಥನ ‘ಬಾಳು’, ಶಾಂತರಾಮ ನಾಯಕರ ‘ನಾಡವರು ಒಂದು ಸಾಂಸ್ಕೃತಿಕ ಅಧ್ಯಯನ’, ‘ಚರಿತ್ರೆಯಲ್ಲಿ ಮರೆತವರ ಕಥೆ’, ‘ಸ್ವಾತಂತ್ರ್ಯ ಹೋರಾಟದ ಹೊರಳುನೋಟ’ ಹೀಗೆ ಕೆಲವು ಕೃತಿಗಳ ಆಧಾರಗಳಿವೆ. ಈ ಜನಹೋರಾಟದ ಒಂದಿಷ್ಟು ಹೆಮ್ಮೆಯ ನೆನಪುಗಳಿವು:

ಈ ಗಂಗಾವಳಿ ನದಿಯ ಆಚೀಚೆ ಊರುಗಳ ಜನರು ದುಡಿದು ಉಣ್ಣುವ ಬಡವರು, ಆತ್ಮಾಭಿಮಾನಿಗಳು. ಗಾಂಧೀಜಿ ಚಿಂತನೆಯಿಂದ ಪ್ರಭಾವಿತರಾಗಿ, ಸ್ವಾತಂತ್ರ್ಯದ ಕನಸು ಕಂಡವರು. ಸತ್ಯಾಗ್ರಹಕ್ಕೆ ಬದ್ಧರಾದವರು. 1985ರ ಗೆಜೆಟಿಯರ್‌ನಲ್ಲಿ **The most notable moving spirit in Ankola Taluk** ಎಂದು ದಾಖಲಾಗಿತ್ತಂತೆ. ಅಂಕೋಲಾ ಸೀಮೆಯ ಈ ಹಳ್ಳಿಗಳನ್ನು ಗಾಂಧಿ ಹಳ್ಳಿ, ಕರಬಂಧಿ ಹಳ್ಳಿ ಎಂದು ಕರೆಯಲಾಗುತ್ತಿತ್ತಂತೆ. ಈ ಜನ, ಬ್ರಿಟಿಷರಿಗೆ ತೆರಿಗೆ ಕಟ್ಟುವುದಿಲ್ಲ ಎಂಬ ಕರನಿರಾಕರಣೆಯ ದೀಕ್ಷೆ ತೊಟ್ಟರು. ಆಸ್ತಿ ಕಳೆದುಕೊಂಡರು. ಕೌಟುಂಬಿಕ ಸೌಖ್ಯವನ್ನು ಬಿಟ್ಟುಕೊಟ್ಟರು. ಊರಿಗೆ ಊರನ್ನೇ ಬ್ರಿಟಿಷರು ಲಾಕ್ ಮಾಡಿದರೂ ಎದೆಗುಂದದೆ, ಸಾಮೂಹಿಕವಾಗಿ ಗುಡಿಯ ಅಂಗಳದಲ್ಲಿ ಚಪ್ಪರ ಹಾಕಿಕೊಂಡು, ಗಂಜಿ ಕುಡಿದು ಬದುಕಿದ ಸೂರ್ವೆ ಈ ಬಾಸ್ಗೋಡಿನ ಅವಳಿ ಹಳ್ಳಿ.

ಉಳ್ಳವರು ಶಿವಾಲಯ ಕಟ್ಟಬಹುದು. ಆದರೆ, ದೊಡ್ಡದೆಂಬುದು ಏನೂ ಇಲ್ಲದ ಈ ಸಾಮಾನ್ಯ ಜನರು ದೇಶದ ಸ್ವಾತಂತ್ರ್ಯಕ್ಕಾಗಿ ಚಿಂತಿಸಿದ್ದು ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿರುವುದು ದೊಡ್ಡದು ಎಂದು ಎಚ್.ಎಸ್. ದೊರೆಸ್ವಾಮಿಯವರು ಉದ್ಗರಿಸಿದ್ದರು. ಈ ಸೀಮೆಯ ಅಸಂಖ್ಯ



ಮಹಿಳೆಯರು ಕುಟುಂಬ ನಿರ್ವಹಣೆಯ ಶ್ರಮದಾಯಕ ಜವಾಬ್ದಾರಿಯನ್ನು ಹೊತ್ತು, ಹೋರಾಟದಲ್ಲಿಯೂ ಗುರುತಿಸಿಕೊಂಡಿದ್ದರು. ಗಾಂಧೀಜಿಯ ಅಹಿಂಸೆ, ಹರಿಜನೋದ್ಧಾರ, ಖಾದಿ, ಸ್ವದೇಶಿ, ಸಮಾನತೆ, ಭ್ರಾತೃತ್ವಗಳು ಅವರ ಬಾಳಿನ ಧ್ಯೇಯವಾದವು. ಚಳವಳಿ ಅವರ ವೈಯಕ್ತಿಕ ಬದುಕಿನಲ್ಲೂ ಸಾಕಷ್ಟು ಪರಿವರ್ತನೆಗಳನ್ನು ತಂದಿತ್ತು. ಬಾಸ್ಗೋಡಿನ ರಾಮಾ ನಾಯಕರು ಈ ಸೀಮೆಯ ಚಳವಳಿಯ ನಾಯಕರಾಗಿದ್ದರು. ‘ಅಳಿವುದು ಕಾಯ, ಉಳಿವುದು ಕೀರ್ತಿ’, ‘ಅಡಿಯ ಮುಂದಿಡೆ ಸ್ವರ್ಗ, ಅಡಿಯ ಹಿಂದಿಡೆ ನರಕ’ ಎಂಬ ಘೋಷವಾಕ್ಯಗಳ ಸ್ಫೂರ್ತಿದಾಯಕ ಮಾತುಗಳಿಂದ ಜನಮಾನಸದಲ್ಲಿ ಸ್ವಾತಂತ್ರ್ಯದ ಕಹಳೆ ಮೊಳಗಿಸಿದ್ದರು. ನಾಲ್ಕೈದು ವರ್ಷಗಳ ದೀರ್ಘಕಾಲ ಕಾರವಾರ, ಹಿಂಡಲಗಾ, ಯರವಾಡ ಜೈಲುಗಳಲ್ಲಿ ಕಳೆದರು. ಮನೆಮನೆಗಳಲ್ಲಿ ಗಾಂಧೀ ಚಿಂತನೆಯಿಂದ ಪ್ರೇರಿತರಾದ ವ್ಯಕ್ತಿಗಳು ರೂಪುಗೊಂಡ ಕಾಲ ಅದು. ಅಂಕೋಲೆಯ ಹೋರಾಟಕ್ಕೆ ಮಾರ್ಗದರ್ಶಕರಾಗಿ ಹುಬ್ಬಳ್ಳಿ, ಧಾರವಾಡ, ಮೈಸೂರು, ಮಂಗಳೂರುಗಳಿಂದ ಬಂದ ನಾಯಕರಿಗೇ ಸ್ಥಳೀಯ ಹೋರಾಟದ ಬಗೆಯನ್ನು ಮಾರ್ಗದರ್ಶನ ಮಾಡಿ ಹೋರಾಟವನ್ನು ಮುನ್ನಡೆಸಿದ ಧೀಮಂತರಿವರು.

ದೇಶಕ್ಕೆ ಬಂದ ಸ್ವಾತಂತ್ರ್ಯ, ಈ ಜನರಿಗೆ ಅವರ ಮನೆಗೆ ಬಂದ ಬಿಡುಗಡೆಯಾಗಿತ್ತು. ಸಿಹಿ ಮಾಡಿ ಉಂಡರು. ಊರ ಹಬ್ಬವಾಗಿ ಸಂಭ್ರಮಿಸಿದ್ದರು. ಅವರು ಸ್ವಾತಂತ್ರ್ಯದಿಂದ ಯಾವ ಲೌಕಿಕ ಪ್ರತಿಫಲಾಪೇಕ್ಷೆಯನ್ನೂ ಪಡೆದಿರಲಿಲ್ಲ. ಆದರೆ, ಗಾಂಧೀಹತ್ಯೆ ಈ ಜನರನ್ನು ತಬ್ಬಿಬ್ಬುಗೊಳಿಸಿತ್ತು. ನಂಬಲು ಅಸಾಧ್ಯವೆನಿಸಿತ್ತು. ಕಣ್ಣೀರಿನಿಂದ ಕೊನೆಯಾಗದ ಹತಾಶೆಯಾಗಿತ್ತು. ಗಾಂಧೀಜಿಯನ್ನು ಸರ್ವಸ್ವವೆಂದು ತಿಳಿದ ರಾಮಾ ನಾಯಕರು ಗಾಂಧೀಜಿ ನೆನಪನ್ನು ಶಾಶ್ವತವಾಗಿಡಲು ಬಯಸಿದರು. ಜನರ ಬೆಂಬಲದೊಂದಿಗೆ ತಮ್ಮ ಸ್ವಂತ ಜಾಗದಲ್ಲಿ ಗಾಂಧೀಗುಡಿ ಕಟ್ಟಿಸಿದರು. ಈ ಜನರ ಗಾಂಧೀಪ್ರೀತಿ, ಶ್ರದ್ಧೆ, ದೇಶಾಭಿಮಾನಗಳ ಪ್ರತೀಕವಾಗಿ, ಗಾಂಧೀವಾದಿ ಸ್ವಾತಂತ್ರ್ಯ ಹೋರಾಟಗಾರ ಬೊಮ್ಮಯ್ಯ ರಾಕು ಗಾಂವಕರರ ನೇತೃತ್ವದಲ್ಲಿ 1959ರಲ್ಲಿ ಗಾಂಧೀ ಮೂರ್ತಿ ಪ್ರತಿಷ್ಠಾಪನೆ ಆಯಿತು. ಆ ಮೂಲಕ ಈ ಜನರ ನಿಷ್ಕಪಟ ಗಾಂಧೀ ಪ್ರೀತಿಯೂ. ಈ ಗುಡಿಗೆ ಪೂಜೆ ಇಲ್ಲ. ಬೀಗವೂ ಇಲ್ಲ. ಬೀಗ ಇಲ್ಲದ ಬಾಗಿಲು ನೋಡಿದರೆ ಗಾಂಧೀ ಚಿಂತನೆಗಳಿಗೆ ಬೀಗ ಬೇಕಿಲ್ಲ ಎಂಬ ಮಾತನ್ನು ಸಾರಿ ಹೇಳುವಂತಿದೆ.

ಇತ್ತೀಚೆಗೆ ಬೆಳಗಾವಿಯಲ್ಲಿ, ಗಾಂಧೀಜಿ ಅಧ್ಯಕ್ಷತೆಯಲ್ಲಿ ನಡೆದ 1924ರ ಕಾಂಗ್ರೆಸ್ ಅಧಿವೇಶನದ ನೂರರ ಸಂಭ್ರಮವನ್ನು ಆಚರಿಸಲಾಯಿತು. ಗಾಂಧೀಜಿ ಅಧ್ಯಕ್ಷತೆ ವಹಿಸಿದ್ದ ಏಕೈಕ ಸಮಾವೇಶ ಎಂಬ ಹೆಮ್ಮೆ 1924ರ ಬೆಳಗಾವಿ ಸಮಾವೇಶಕ್ಕಿದೆ. ಹಾಗೆಯೇ ಈ ಸಮಾವೇಶದ ಸಂಘಟನೆಯಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ, ಉಮಾಬಾಯಿ ಕುಂದಾಪುರ ಅವರು ನೇತೃತ್ವ ವಹಿಸಿದ್ದರು ಎಂಬ ಅಪರೂಪದ ಸಂಗತಿಯೂ ಇದೆ. ಈ ಚಾರಿತ್ರಿಕ ನೆನಪಿಗೆ ಗಾಂಧೀ ಮೂರ್ತಿ ಪ್ರತಿಷ್ಠಾಪನೆಯಾಗಿದೆ. ಹಾಗೆಯೇ ಹಳ್ಳಿ ಹಳ್ಳಿಗಳಲ್ಲಿರುವ ಗಾಂಧೀ ಸ್ಮಾರಕಗಳನ್ನು ಪುನರುಜ್ಜೀವನ ಮಾಡಿ ಸುರಕ್ಷಿತವಾಗಿ ಸುಂದರವಾಗಿ ಕಾಯ್ದುಕೊಂಡು ಹೋಗುವ ವ್ಯವಸ್ಥೆಯನ್ನು ಮಾಡಬೇಕಿದೆ. ಗ್ರಾಮಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಸುಲಭವಾಗಿ ಈ ನಿರ್ವಹಣೆ ಮಾಡಬಹುದು. ಆಗ ಶುಚಿ ಇಲ್ಲದ, ಕಾಳಜಿ ಇಲ್ಲದ ಸ್ಥಿತಿಯನ್ನು ನೋಡುವ ದುಖ ತಪ್ಪುತ್ತದೆ. ಇದರಿಂದ ಗಾಂಧೀಜಿ ಎಂಬ ಅರಿವನ್ನೂ ಆ ಚಿಂತನೆಯನ್ನು ಪಾಲಿಸಿದ ಜನರ ಬದ್ಧತೆ–ವಿವೇಕಗಳನ್ನು ಗೌರವಿಸಿದಂತೆಯೂ ಆಗುತ್ತದೆ. ಪರಂಪರೆಯ ನಿಜದ ಅರಿವಿಲ್ಲದ ನನ್ನಂಥವರಿಗೆ, ನನ್ನ ತಲೆಮಾರಿಗೆ ಸತ್ಯದರ್ಶನದ ಸೌಖ್ಯ ಒದಗುತ್ತದೆ.

ಪ್ರತಿಕ್ರಿಯಿಸಿ: **feedback@sudha.co.in**